
ಜೂನ್ 2016

# ಕಾನನ

ನಿಸರ್ಗದೆಡೆಗೆ ಪಯಣ



BANNERUGHATTA

WILDLIFE
CONSERVATION
GROUP

# ಕಾನನ

## ನಿಸರ್ಗದೆಡೆಗೆ ಪಯಣ



ಮುಖಪುಟ


ಕಲ್ಲೊಳಗೆ ಹುಟ್ಟಿರುವ ಅರಳಿ

© Vipin Baliga

ಜೂನ್ 2016

BANNERUGHATTA

**WILDLIFE CONSERVATION GROUP**



* ಗುಂಡ್ರೆ ಮಾರಮ್ಮನ ಜಾತ್ರೆ
* ಬೆಪ್ಪಾದ ನಾಲ್ವರು
* ಕೀಟಲೋಕಕ್ಕೆ ಹೊಸತು
* ಭೂ ದಿನ (ಕವನ)
* ಪ್ರಕೃತಿ ಬಿಂಬ

**ಲೇಖಕ ವೃಂದ**

ಸೋಮಶೇಖರ್ .ಕೆ .ಸಿ

ಮಧುಸೂದನ್ .ಎಚ್.ಸಿ

ಶಂಕರಪ್ಪ .ಕೆ .ಪಿ

ಕೃಷ್ಣನಾಯಕ್

ಕಾರ್ತಿಕ್ .ಎ .ಕೆ

**ವಿನ್ಯಾಸ**

ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**

ವಿಪಿನ್ ಬಾಳಿಗ

**ಪರಿಷ್ಕರಣೆ**

ಮುರಳಿ .ಎಸ್

© Vipin Baliga

# ಗುಂಡ್ರೆ ಮಾರಮ್ಮನ ಜಾತ್ರೆ



ಕಬಿನಿ ನದಿಯಲ್ಲಿ ನೀರಿಲ್ಲದೇ ಬತ್ತಿ ಹೋಗಿ, ಬಿರುಕು ಬಿಟ್ಟು, ಮುಂಗಾರು ಮಳೆಯ ಹನಿಗಳ ಆಹ್ವಾನಕ್ಕೆ ಬಾಯಿ ತೆರೆದು ಹಂಬಲಿಸುವಂತೆ ಭಾಸವಾಗುತ್ತಿತ್ತು. ಕಬಿನಿ ಎಲ್ಲರಿಗೂ ಗೊತ್ತಿರಬಹುದು ಅಲ್ವ!, ಅದು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿದೆ. ಕೇರಳದ ವೈನಾಡಿನಲ್ಲಿ ಹುಟ್ಟಿ ಹರಿಯುವ ನದಿ, ಬಂಡೀಪುರ ಅಭಯಾರಣ್ಯ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳನ್ನು ಬೇರ್ಪಡಿಸುತ್ತದೆ. ಕಬಿನಿಯ ಹಿನ್ನೀರಿನ ತುದಿ, ಅಂದರೆ ಬಂಡೀಪುರ ಅಭಯಾರಣ್ಯದ ಪಶ್ಚಿಮದ ತುದಿ ಹಾಗು ಕೇರಳ ರಾಜ್ಯ ಆರಂಭದ ಗಡಿಯೇ ಗುಂಡ್ರೆ ಮಾರಮ್ಮನ ದೇವಸ್ಥಾನ. ಬಂಡೀಪುರ ಕಾಡಿನ ಗುಂಡ್ರೆ ವಲಯದಲ್ಲಿಯೇ ಈ ದೇವಸ್ಥಾನವಿದೆ.

ಈ ದಟ್ಟ ಕಾಡು ಆನೆ, ಹುಲಿ, ಚಿರತೆ, ಕಾಡೆಮ್ಮೆ, ಕೆನ್ನಾಯಿ ಮುಂತಾದ ಪ್ರಾಣಿಗಳ ತಾಣ!. ದೊಡ್ಡ ದೊಡ್ಡ ತೇಗದ ಮರಗಳ ದಟ್ಟ ದಂಡಕಾರಣ್ಯ!. ಅಂತಹ ಕಾಡಿನಲ್ಲಿ ಎಷ್ಟೋ ಸಾವಿರಾರು ವರ್ಷಗಳಿಂದ ಬಾಳಿ ಬದುಕಿ ಬಂದ ಕಾಡುಕುರುಬ, ಜೇನುಕುರುಬ, ಯರವ, ಸೋಲಿಗ ಗಿರಿಜನರ ದೈವ ನೆಲೆಸಿರುವುದೇ ಅಲ್ಲಿ. ಆದ್ದರಿಂದ ಪ್ರತಿವರ್ಷವೂ ಇವರು ತಮ್ಮ ದೈವವನ್ನು ಆರಾಧಿಸಲು ಇಲ್ಲಿ ಬಂದು ಜಾತ್ರೆಯನ್ನು ಮಾಡಿ ತಮ್ಮನ್ನು ಪುನರ್ವಸತಿಗೊಳಿಸಿರುವ ಊರುಗಳಿಗೆ ಹಿಂದಿರುಗುತ್ತಾರೆ. ಜಾತ್ರೆಯಲ್ಲಿ ನೆರೆದವರು ಇಲ್ಲಿ ಪ್ಲಾಸ್ಟಿಕ್ ಸಾಮಾಗ್ರಿಗಳನ್ನು ಬಳಸುವುದರಿಂದ ಕಾಡಿನ ಜೀವಿಗಳಿಗಾಗುವ ತೊಂದರೆಯನ್ನರಿತ ನಮ್ಮ ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್ ಕಳೆದ ನಾಲ್ಕೈದು ವರ್ಷಗಳಿಂದ ಕರ್ನಾಟಕ ಅರಣ್ಯ



ಇಲಾಖೆಯ ಸಹಕಾರದೊಂದಿಗೆ ಜಾತ್ರಾಸ್ವಚ್ಛತಾ ಕಾರ್ಯಕ್ರಮ ಕೈಗೊಳ್ಳುತ್ತಾ ಬಂದಿದೆ. ಜಾತ್ರೆಯು ಪೂರ್ಣಗೊಂಡ ನಂತರ ಉತ್ಪತ್ತಿಯಾದ ಪ್ಲಾಸ್ಟಿಕ್ ಹಾಗೂ ತ್ಯಾಜ್ಯ ವಸ್ತುಗಳನ್ನು ದೊಡ್ಡ-ದೊಡ್ಡ ಪ್ಲಾಸ್ಟಿಕ್ ಚೀಲಗಳಲ್ಲಿ ಸಂಗ್ರಹಿಸಿ ಕಾಡಿಂದ ಹೊರತಂದು ಅದನ್ನು ಪುನರ್ಬಳಕೆಗೆ ಉಪಯೋಗಿಸಲು ಕಳುಹಿಸಿಕೊಡುತ್ತಿದ್ದಾರೆ. ಹಾಗೆಯೇ ಈ ವರ್ಷವೂ ಜಾತ್ರೆಗೆ ಹೊರಟ ನಮ್ಮ ತಂಡದ ಜೊತೆಗೆ ಹಿಂದಿನ ವರ್ಷದಂತೆ ನಾನು ಜೊತೆಯಾದೆನು.



ನಾವು ಗುಂಡ್ರೆಯನ್ನು ತಲುಪುವ ಮೊದಲೇ ಗಿರಿಜನರು ಜಾತ್ರೆಗೆ ಬೇಕಾದ ಸರಕು-ಸಾಮಾನುಗಳನ್ನು ತಮ್ಮ ಊರಿನಿಂದ ಗುಂಡ್ರೆ ದೇವಸ್ಥಾನಕ್ಕೆ ಸಾಗಿಸಿ ಬಿಟ್ಟಿದ್ದರು. ಮೊದಲು ಕಾಡಿನಲ್ಲಿ ಅಂಗಡಿಗಳಿಗೆ ಅವಕಾಶ ಇರಲಿಲ್ಲ, ಏಕೆಂದರೆ ತುಂಬ ದೂರ ಕಾಲುನಡಿಗೆಯಲ್ಲಿಯೇ ಬರಬೇಕಿತ್ತು, ನಡೆಯುವುದೇ ಕಷ್ಟವಾಗಿದ್ದರಿಂದ ಅಂಗಡಿ ಸಾಮಾಗ್ರಿಗಳನ್ನು ಹೊರುವ ಸಾಹಸಕ್ಕೆ ಯಾರು ಕೈ ಹಾಕಿರಲಿಲ್ಲ ಬಿಡಿ!. ಆದರೆ ಈಗ ವಾಹನಗಳ ಪ್ರವೇಶದಿಂದ ಅಂಗಡಿ ಮುಗ್ಗಟ್ಟುಗಳ ದಂಡು ವರ್ಷದಿಂದ ವರ್ಷಕ್ಕೆ ಏರುತ್ತಿದೆ.

ನಾವು ಜಕ್ಕಳ್ಳಿ ಗ್ರಾಮಸ್ಥರ ಜೊತೆಗೂಡಿ ಕಾಲ್ನಡಿಗೆಯಲ್ಲಿ ಆಗಸದೆತ್ತರಕ್ಕೆ ನಿಂತ ಸಾಗುವಾನಿ ಮರಗಳ ಕಾಡಿನ ನಡುವೆ ಸಾಗುವ ಆ ಕಾಡು ದಾರಿಯಲ್ಲಿ ನಿಶ್ಯಬ್ಧವಾಗಿ ಚಲಿಸಬೇಕಾದರೆ, ದಾರಿಯಲ್ಲಿ ಆನೆಗಳ ಗುಂಪೊಂದು ಎದುರಿಗೆ ಕಾಣಿಸಿದವು!, ಕಳೆದ ಬಾರಿ ತುಂಬಾ ಕಡಿಮೆ ಪ್ರಾಣಿ-ಪಕ್ಷಿಗಳು ಕಾಣಸಿಕ್ಕಿದ್ದವು.

ಆದರೆ ಈ ಬಾರಿ ಮಾತ್ರ ಆನೆಗಳು, ಕಾಟಿಗಳು, ಜಿಂಕೆಗಳು, ಕಾಡುಹಂದಿ, ಕಡವೆಗಳು, ಚಿರತೆ ಈ ಎಲ್ಲಾ ಪ್ರಾಣಿಗಳಿಗಿಂತ, ರಾಜ ಗಾಂಭೀರ್ಯದಿಂದ ಮೆರೆಯುವ ಹುಲಿ!. ಹುಲಿಯನ್ನು ನಾನು ಎಂದೂ ಕಾಡಿನಲ್ಲಿ ನೋಡಿದವನಲ್ಲ. ಒಮ್ಮೆ ಪಾರ್ಕಿನಲ್ಲಿ ನೋಡಿದ್ದೆ, ಕಾಡಿನಲ್ಲಿ ಓಡಾಡಿಕೊಂಡು ಇರುವ ಹುಲಿಗೂ, ಬೋನಿನಲ್ಲಿರುವ ಹುಲಿಗೂ ವ್ಯತ್ಯಾಸವಿದೆ. ನಾನು ಕಾಡಿನಲ್ಲಿರುವ ಆ ವನರಾಜನನ್ನು ಕಂಡು ಬಹಳ ಖುಷಿಪಟ್ಟೆ. ಆ ದಟ್ಟ ಕಾಡಿನ ಮರಗಳ ಮಧ್ಯೆ ಲೀಲಾಜಾಲವಾಗಿ ಮಲಗಿದ್ದ ಸನ್ನಿವೇಶ, ಅದು ನಮ್ಮನ್ನು ನೋಡಿದ ನೇರ ದಿಟ್ಟ ದೃಷ್ಟಿ ಈಗಲೂ ಒಮ್ಮೆ ಕಣ್ಮುಂದೆ ಹಾಗೆ ನಿಲ್ಲುತ್ತದೆ, ಜನರೆಲ್ಲ ಗಲಾಟೆ ಮಾಡಿ ಓಡಿಸಿದಾಗ ಅದು ಸುಮ್ಮನೆ ನಮ್ಮನ್ನು ನೋಡಿ ಕಾಡಿನ ಪೊದೆಯತ್ತ ಹಿಂತಿರುಗಿದ ರೀತಿ, ಎಲ್ಲವೂ ನನ್ನ ಕಣ್ಣಿನಲ್ಲಿ ಕಟ್ಟಿದಂತಿದೆ. ಜನರ ದಟ್ಟಣೆ ತುಂಬಾ ಕಡಿಮೆ ಇದ್ದ ಕಾರಣವಿರಬಹುದೊ ಏನೊ? ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚು ಪ್ರಾಣಿಗಳ ದರ್ಶನವಾಯಿತು. ಒಟ್ಟಿನಲ್ಲಿ ನಾವು ಗುಂಡ್ರೆಯನ್ನು ತಲುಪುವ ಹೊತ್ತಿಗೆ ಕತ್ತಲಾಗಿತ್ತು. ಅಲ್ಲಿ ಬರುವ ಜನಸಮುದಾಯಗಳ ಊಟೋಪಾಚಾರಗಳಿಗೆ ಬೇಕಾಗುವ ಸರಕು, ದೇವರ ಪೂಜಾ-ಪರಿಕಾರಗಳು ಎಲ್ಲವೂ ದೇವರ ಗುಡಿ ಸೇರಿಬಿಟ್ಟಿದ್ದವು. ಕಬಿನಿ ನದಿಯ ದಂಡೆಯಲ್ಲಿಯೇ ರಾತ್ರಿಯ ಪ್ರಸಾದದ ತಯಾರಿಗಳು ಜೋರಾಗಿ ನಡೆಯುತ್ತಿತ್ತು. ದೊಡ್ಡ ಕೊಪ್ಪರಿಗೆಯಲ್ಲಿ ಬೇಯುತ್ತಿದ್ದ ಸಾಂಬಾರಿನ ವಾಸನೆ ಮೂಗಿಗೆ ಬಡಿದು ಹೊಟ್ಟೆ ಚುರ್ ಗುಟ್ಟಿತು.



ಕಗ್ಗತ್ತಲ ಆಕಾಶದಲ್ಲಿ ಚಲಿಸುವ ಮೋಡಗಳ ನಡುವೆ ಜ್ವಲಿಸುವ ನಕ್ಷತ್ರಗಳು ಅದೆಲ್ಲಿಗೋ ಪ್ರಯಾಣ ಬೆಳೆಸಿದಂತೆ ಭಾಸವಾಗುತ್ತಿತ್ತು!, ಮತ್ತೊಂದು ಕಡೆ ಕತ್ತಲೆಯನ್ನು ಸೀಳಿ ಉರಿಯುತ್ತಿದ್ದ ಒಲೆಯ ಬೆಂಕಿಯ ಮೇಲೆ ಸುಡುಸುಡು ಹಬೆಯಿಡುವ ಕೀರು, ಅನ್ನ-ಕಾಳುಸಾರುಗಳು ಬೇಯುತ್ತಿತ್ತು. ಆ ರಾತ್ರಿ ತಡವಾಗಿ ಸವಿದ ಊಟ ಈಗಲೂ ಮರೆಯಲು ಆಗದು ಬಿಡಿ!.

ಪ್ರಸಾದ ಅನ್ನುವ ಊಟ ಮುಗಿಸಿ, ತಡ ಕತ್ತಲ ರಾತ್ರಿ ಭೋಜನದ ಗುಡಿಸಲಿನಿಂದ ದೇವರ ಗುಡಿಯತ್ತ ನಡೆಯಬೇಕಾದರೆ ಅಲ್ಲೇ ಪಕ್ಕದಲ್ಲಿಯೇ ಆನೆಗಳ ಕೂಗು, ದೂರದಲ್ಲೆಲ್ಲೋ ಮೂಸುವಗಳ ಕಿರುಚಾಟ, ಹುಲಿಯ ಘರ್ಜನೆ, ಕೆನ್ನಾಯಿಗಳ ರೋಧನೆ ಎದೆಯಲ್ಲಿ ಒಮ್ಮೆ ಝಲ್ ಎನಿಸಿತು. ಈ ಶಬ್ಧಗಳ ಅಲೆಯ ಉನ್ಮಾದದಲ್ಲಿ ತೇಲುತ್ತಿದ್ದ ನನಗೆ ಗುಡಿಯ ಮೇಲೆಲ್ಲ ಥಳಪಳ ಉರಿಯುತ್ತಿದ್ದ ಸೀರೀಯಲ್ ಸೆಟ್ ಗಳನ್ನು ಕಂಡು ತಕ್ಷಣದಲ್ಲಿ ಯಾವುದೋ ನಗರಕ್ಕೆ ಕಾಲಟ್ಟಂತೆ ಭಾಸವಾಯಿತು. ಗಿರಿಜನರು ಅವರದೇ ಆದ ಸಾಂಸ್ಕೃತಿಕ ವಾದ್ಯ-ವೃಂದಗಳ ಬುಡಕಟ್ಟು ನೃತ್ಯಗಳಲ್ಲಿ ಲೀನವಾಗಿ ಹೋಗಿದ್ದರು. ಆದರೆ ಅದೆಷ್ಟೋ ವರ್ಷಗಳಿಂದ ನಡೆದುಕೊಂಡು ಬಂದಿರುವ *ಗುಂಡ್ರೆ ಮಾರಮ್ಮನ ಜಾತ್ರೆ,* ಬರಬರುತ್ತಾ ಆ ದೈವತ್ವ ಕಡಿಮೆಯಾಗಿ ಆಧುನಿಕತೆಗೆ ಸಿಲುಕಿ ನಿಧಾನವಾಗಿ ಆ ಪೂಜಾ ಭಾವನೆಗಳು ಕ್ಷೀಣಿಸುತ್ತಾ ಹೋಗಿವೆ.




ಕಾಡಿನಕಲ್ಲೇ ದೇವರ ರೂಪದಲ್ಲಿದ್ದಿದ್ದು ಈಗ ಅದಕ್ಕೆ ಕಂಚು, ಪ್ಲಾಸ್ಟಿಕಿನ ಲೇಪನಗಳು ಮೂಡಿವೆ. ಕಾಡುಹೂವುಗಳು, ತಳಿರು-ತೋರಣಗಳಿಗೆ ಬದಲು ಸೀರೀಯಲ್ ಸೆಟ್ ಗಳು, ಪ್ಲಾಸ್ಟಿಕ್- ಪೇಪರ್ಗಳು ಬಂದಿವೆ!. ಐದು ವರ್ಷಗಳ ಹಿಂದೆ ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್ ಬೇಟಿಕೊಟ್ಟಾಗ ಗಿರಿಜನ ಹಳೆಯ ತಲೆಗಳ ನಾಯಕತ್ವ ಆದಷ್ಟು ದೇವರ ಭಕ್ತಿಗೆ ಹತ್ತಿರವಿದ್ದದ್ದು, ಅವರದೇ ಆದ ವಾದ್ಯ-ಮೇಳಗಳು, ಅವರುಗಳ ಕುಣಿತ ಸಂಪ್ರದಾಯಿಕವಾಗಿದ್ದದ್ದು, ಆ ಕಾಡು ದೇವತೆಗೆ ತುಂಬಾ ಹತ್ತಿರವಾಗಿತ್ತು. ಆದರೆ ಈಗ, ಆ ವಾದ್ಯ-ಮೇಳಗಳು ಇವೆ!, ಆದರೆ ಈ ಗಿರಿಜನರ ಯುವ ಪೀಳಿಗೆ ಸಿನಿಮಾ ಹಾಡು, ಸಿನಿಮಾ ಸಂಗೀತಗಳಿಗೆ ಮಾರುಹೋಗಿ ಆಧುನಿಕತೆ ಎಂಬ ಭೂತಕ್ಕೆ ಸಿಲುಕಿ ಅವರುಗಳ ಸಂಪ್ರದಾಯಗಳು ಎಲ್ಲೆಯನ್ನು ಮೀರಿ ತುಂಬಾ ದೂರ ಸಾಗಿ ಹೋಗಿವೆ.

ಗುಂಡ್ರೆ ಜಾತ್ರೆಗೆ ಕಾಡಿನ ಸುತ್ತಲಿನ ಕಾಡುಕುರುಬ, ಜೇನುಕುರುಬ, ಯರವ, ಸೋಲಿಗ ಎಲ್ಲಾ ಗಿರಿಜನರ ಸಮುದಾಯಗಳು, ಗ್ರಾಮಸ್ಥರುಗಳು ಭಾಗವಹಿಸುತ್ತಾರೆ. ಇಲ್ಲಿ ಕೆಲ ಜನರು ದೇವರಲ್ಲಿನ ಭಕ್ತಿಗೆ, ಪೂಜಾ ವಿಧಿವಿಧಾನಗಳಿಗೆ ಬಂದರೆ, ಕೆಲ ಜನರು ಅಮಲಿನಲ್ಲಿ ಕುಣಿದು-ಕುಪ್ಪಳಿಸಲೂ ಬರುತ್ತಾರೆ, ಅದೂ ಭಕ್ತಿ ಇರಬಹುದು!. ಇನ್ನೂ ಕೆಲವರು ವ್ಯಾಪಾರ ಮಾಡಲು ಸಹ ಬರುವುದುಂಟು. ಕಾಫೀ, ಟೀ, ತಿಂಡಿ, ಪೂಜಾ ಸಾಮಾಗ್ರಿಗಳು, ಆಟಿಕೆ ಸಾಮಾನುಗಳು ಸಾಮಾನ್ಯವಾಗಿ ಎಲ್ಲಾವು ಅವರ ಅಂಗಡಿಗಳಲ್ಲಿ ಈ ನಿಭಿಡ ಕಾನನದಲ್ಲಿಯೂ ಲಭ್ಯ. ಈ ಜಾತ್ರೆಯ

ಎರಡು ದಿನದ ಮಟ್ಟಿಗೆ ನಡೆಯುವುದರಿಂದ ಅಲ್ಲಿನ ಜನರು ತುಂಬಾ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ವಸ್ತುಗಳನ್ನು ಬಳಸುತ್ತಾರೆ. ಈ ಎಲ್ಲಾ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ದೊಡ್ಡ ದೊಡ್ಡ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಕಾಡಿನಿಂದ ಹೊರತರಲು ನಮಗೆ ಸಾಕಷ್ಟು ಸಮಯವೇ ಬೇಕಾಯಿತು.

ಈ ಜಾತ್ರೆಯಲ್ಲಿ ನಮ್ಮ ಹಿರಿಯ ಸಂಗಡಿಗರನ್ನು ನೋಡಿ, ನಾನು ಕಾಡಿನ ಒಳಗೆ ಹೋದಾಗ ಕಾಡನ್ನು ನೋಡಿ ಹೇಗೆ ಆನಂದಿಸಬೇಕೆಂದೂ, ಕಾಡು ಹಾಗೂ ಕಾಡುಪ್ರಾಣಿಗಳಿಗೆ ತೊಂದರೆಯಾಗದಂತೆ ಹೇಗೆ ವರ್ತಿಸಬೇಕೆಂದೂ ಸಹ ಅರಿತುಕೊಂಡೆ. ನಮ್ಮ ತಂಡವು ರಾತ್ರಿ ಪೂರ *ಗುಂಡ್ರೆ ಮಾರಮ್ಮನ ಗುಡಿಯ* ಕಾಡಿನಲ್ಲೇ ಮಲಗಿದ್ದುದು ಬಹಳ ರೋಮಾಂಚನವಾಗಿತ್ತು!, ಮತ್ತೆ ಮರುದಿನ ಬೆಳಿಗ್ಗೆ ನಾವೆಲ್ಲ ಕಬಿನಿ ನದಿಯ ನೀರಿನಲ್ಲಿ ಆಟವಾಡಿದ್ದೂ ಹಾಗೂ ಈಜು ಹೊಡೆದಿದ್ದು ಮನಸಿನಲ್ಲಿ ಅಚ್ಚು ಮೂಡಿಸಿದ ಸಂಗತಿಗಳು.






- ಸೋಮಶೇಖರ್ .ಕೆ .ಸಿ

# ಬೆಪ್ಪಾದ ನಾಲ್ವರು



ಪ್ರಕೃತಿಯ ಮಡಿಲಿಗೂ ಹಾಗೂ ಹೆತ್ತ ತಾಯಿಯ ಲಾಲಿ ಹಾಡಿಗೂ ಏನೋ ಒಂದು ಅಗೋಚರವಾದ ಅವಿನಾಭಾವ ಸಂಭಂದವಿದೆ. ಹೆತ್ತ ತಾಯಿಯು ಮಗುವನ್ನು ಸಂತೈಸಲು ಎಷ್ಟು ಕಷ್ಟ ಪಡುತ್ತಾಳೋ ಹಾಗೆಯೇ ಪ್ರಕೃತಿ ಮಾತೆಯು ತನ್ನ ಜೀವಸಂಕುಲವನ್ನು ಉಳಿಸಲು ಬೆಳೆಸಲು ಕಷ್ಟ ಪಟ್ಟಿದ್ದಾಳೆ ಹಾಗೂ ಪಡುತ್ತಲೂ ಇದ್ದಾಳೆ. ಮಕ್ಕಳು ಏನೇ ತಪ್ಪು ಮಾಡಿದರು ಕ್ಷಮಿಸುವ ಕ್ಷಮಯಾ ಧರಿತ್ರಿಯರು ಇವರು. ಇಂತಹ ತ್ಯಾಗಮಯಿಗಳಿಗೆ ನಾವು ಏನು ಸೇವೆ ಮಾಡಿದರೂ ಕಡಿಮೆಯೇ, ನಾವೆಲ್ಲರೂ ಇವರಿಗೆ ಚಿರಋಣಿ.

ಮಂದ ಬೆಳಕಿನ ರಾತ್ರಿಯಲ್ಲಿ ತುಂಬಾ ಹುಷಾರಾಗಿ ಬೆಟ್ಟದ ಇಳಿಜಾರು ಪ್ರದೇಶವನ್ನು ಇಳಿಯುತ್ತಿರುವಾಗ *''ನಿಲ್ಲಿ ಸ್ವಲ್ಪ ನಿಲ್ಲಿ''* ಎಂದರು ಅಶ್ವಥ್. ಕಾಲುದಾರಿಯ ಪಕ್ಕದಲ್ಲಿರುವ ಗಿಡಗಳ ಪೊದೆಯೊಂದನ್ನು ದಿಟ್ಟಿಸಿ ನೋಡುತ್ತಾ ನಿಂತು ಮತ್ತೆ ನಿಶಬ್ಧವಾಗಿರುವಂತೆ ಕೈಸನ್ನೆ ಮಾಡಿದರು. ಸುತ್ತಲು ಗಾಢವಾದ ಕತ್ತಲು, ಕೈಯಲ್ಲಿ ನನ್ನ ಮೊಬೈಲ್ ಟಾರ್ಚ್ ಬಿಟ್ಟರೆ ನನಗೆ ಬೇರೇನು ಉಪಯೋಗಕ್ಕೆ ಬರದ ಹಾಗಾಯಿತು. ಜೊತೆಯಲ್ಲಿಯೇ ಬಾಲ ಅಲ್ಲಾಡಿಸಿ ಕೊಂಡು ಬರುತ್ತಿದ್ದ ನಾಯಿಮರಿಯು ಸಹ ಆ ಕಡೆಯೇ ನಿಂತು ಮುಖಮಾಡಿ ಒಂದೇ ಸಮನೆ ಬೊಗಳ ತೊಡಗಿತು. *"ಅಶ್ವಥ್. . .! ವಾಸನೆ ನೋಡು, ಒಳ್ಳೆ ಹುಲಿ ವಾಸನೆ ಬಂದಂಗೆ ಬರ್ತಿಲ್ವ"* ಎಂದ ಮಾದೇವು. ನಾನು ತಕ್ಷಣ ಅಶ್ವಥ್ ಕಡೆ ತಿರುಗಿನೋಡಿದೆ ಅವ್ರು ಕೂಡ ಹೌದು ಎಂಬಂತೆ ತಲೆಯಾಡಿಸತೊಡಗಿದರು. *"ಹೂ. . ಅಶ್ವತಣ್ಣ ನಂಗು ಅದೇ ಥರ ವಾಸನೆ ಬರ್ತಯ್ತೆ"* ಎಂದ ನಾಗೇಶ. ಇಷ್ಟು ಸಾಕಾಗಿತ್ತು ನನ್ನ ಕೈಕಾಲು ರೋಮಗಳು ನೆಟ್ಟಗೆ ನಿಲ್ಲಲು. ನನ್ನ ಪ್ರಾಣವೆಲ್ಲ ಹಿಡಿಯಾಗಿ ಬಂದು ನನ್ನ ತಲೆಯಲ್ಲಿ ಕುಳಿತಂತೆ ಭಾಸವಾಯಿತು. ಬೇಕಿರುವ ಸಮಯದಲ್ಲಿ ಎಷ್ಟು ನೆನೆಪಿಸಿ ಕೊಂಡರು ಬರದೆ ಬೆಂಕಿಕಾಯಿಸಿಕೊಂಡು ಕೂರುವ ನೆನಪುಗಳು ಬೇಡದಿರುವ


ಭರತನಾಟ್ಯ, ಕುಚುಪುಡಿ, ಮುಂತಾದ ನೃತ್ಯಗಳನ್ನು ತೋರಿಸಿ ಬಿಡುತ್ತವೆ. ಹಾಗೆಯೇ ನನ್ನ ತಲೆಯಲ್ಲಿ ತಕ್ಷಣ ಕೆನೆತ್ ಆಂಡರ್ಸನ್, ಜಿಮ್ ಕಾರ್ಬೆಟ್ ಹುಲಿ ಬೇಟೆಯ ಕಥೆಗಳು ನೆನಪಾಗ ತೊಡಗಿದವು.




ಮನುಷ್ಯ ಎಂಬ ಪ್ರಾಣಿಯನ್ನು ತುಂಬಾ ಡಿಸೈನ್ ಡಿಸೈನ್ ಆಗಿ ಸಾಯಿಸಿ ತಿನ್ನುವ ನರಭಕ್ಷಕ ಹುಲಿಗಳ ಬಗ್ಗೆ ಯಾಕಾದರೂ ಓದಿ ಬಿಟ್ನೋ ಅನ್ನಿಸ್ತು. ತುಂಬಾ ನಾಜುಕಾಗಿ ಶಿಸ್ತು ಬದ್ಧವಾಗಿ ಬೇಟೆಯಾಡುವ ಈ ಹುಲಿಗಳು ಸೂಕ್ಷ್ಮ ಹಾಗು ಅತೀ ಸೂಕ್ಷ್ಮವಾದ ಬದಲಾವಣೆಗಳನ್ನೂ ಗ್ರಹಿಸುತ್ತವೆ. ಸಾಮಾನ್ಯವಾಗಿ ಎಲ್ಲ ಹುಲಿಗಳು ನರಭಕ್ಷಕಗಳಾಗಿರುವುದಿಲ್ಲ. ತಮ್ಮ ಬೇಟೆಯ ಸಾಮರ್ಥ್ಯ ಕುಗ್ಗಿದಂತೆ ಅವು ತಮ್ಮ ಬೇಟೆಗೆ ಬಲಹೀನ ಪ್ರಾಣಿಗಳ ಮೊರೆ ಹೋಗುತ್ತವೆ, ಅದರಲ್ಲಿ ಮಾನವ ಪ್ರಾಣಿಯು ಒಬ್ಬ. ಈ ಕಥೆಗಳಲ್ಲಿ ನನಗೆ ಯಾವಾಗಲು ಕಾಡುವ ಪ್ರಸಂಗವೆಂದರೆ ಜಗಳದಲ್ಲಿ ಒಂದು ಕಾಲನ್ನು ಕಳೆದುಕೊಂಡ ಹುಲಿಯೊಂದು ಸುಮಾರು 250ಕೆಜಿ ತೂಕವಿರುವ ಎಮ್ಮೆಯನ್ನು ಬೇಟೆಯಾಡಿ ತನ್ನ ಬಾಯಲ್ಲಿ ಅದನ್ನು ಕಚ್ಚಿಹಿಡಿದು ದಾರಿಯಲ್ಲಿ ಸಿಕ್ಕ ಸುಮಾರು 15 ಅಡಿ ಕಂದಕವನ್ನು ಹಾರಿ ಆ ಮೂರು ಕಾಲುಗಳಲ್ಲಿ ಸುಮಾರು 70 ಅಡಿ ಬೆಟ್ಟವನ್ನೇರಿ ತಾನು ಕಚ್ಚಿ ತಂದಿರುವ ಬೇಟೆಯನ್ನು ತಿಂದಿರುತ್ತದೆ. ಇದೊಂದು ಘಟನೆ ಸಾಕು ಹುಲಿಯ ಶಕ್ತಿ ಸಾಮರ್ಥ್ಯಗಳನ್ನು ಅಳೆಯಲು, ಇನ್ನು 50-60 ಕೆಜಿ ತೂಗುವ ಮನುಷ್ಯ ಅದಕ್ಕೆ ಯಾವ ಲೆಕ್ಕ. ಆ ಕ್ಷಣ ನಾನೆಂದು ಕೊಂಡೆ, ಇವತ್ತು ನಾನೇ ಆ ಹುಲಿಗೆ ಗೋಬಿ ಮಂಚೂರಿ! *"ಅಯ್ಯೋ ಮೊನ್ನೆ ಮೊನ್ನೆ ಇನ್ನು ಸಂಕ್ರಾಂತಿ ಹಬ್ಬದಲ್ಲಿ ಪೊಂಗಲ್ ತಿಂದಿದ್ದೆ, ಶಿವರಾತ್ರಿ ಹಬ್ಬದ ತಂಬಿಟ್ಟು ತಿಂದಲೇ ಹೊಗೆ ಹಾಕುಸ್ಕೊ ಬಿಡ್ತಿಯಲ್ಲೋ ಮಾರಾಯ"* ಎಂದು ಮನಸ್ಸು ಮರುಗತೊಡಗಿತು. ಎರಡು ನಿಮಿಷ ಯಾರೊಬ್ಬರು ಮಾತಾಡಲಿಲ್ಲ ನಿಂತಲ್ಲಿಯೇ ಸ್ಥಬ್ಧವಾಗಿ ನಿಂತಿದ್ದರೂ ಕಿವಿಗಳು ತೂತಿಡುವಂತೆ ಜೀರುಂಡೆಗಳು *"ಟರ್ರ್. . ."* ಎಂದು ಒಂದೇ ಸಮನೆ ಚೀರುತ್ತಿದ್ದವು. ತೆಕ್ ತೆಕ್ ತೆಕೋ ತೆಕ್. . . ಎಂದು ಅಲ್ಲೊಂದು ಇಲ್ಲೊಂದು ಕಾಡುಕೋಳಿಗಳ ಶಬ್ಧ ಕೇಳಿ ಬರುತ್ತಿತ್ತು. ಕಾಡಿಗೆ ಕಾಡೆ ಕಗ್ಗತ್ತಲಲ್ಲಿ ಬಾಯ್ತೆರೆದು ನಮ್ಮನ್ನು ನುಂಗಲು ಸಿದ್ಧವಾಗಿದೆಯೇನೋ ಎಂಬಂತೆ ಭಾಸವಾಗುತ್ತಿತ್ತು. ಮತ್ತದೇ ಪೊದೆಯಿಂದ ಸರಸರ ಶಬ್ಧ ಮಾಡಿದ ಹಾಗಾಯಿತು. ಸುಮ್ಮನಿದ್ದ ನಾಯಿಮರಿ ಮತ್ತೆ ಬೊಗಳತೊಡಗಿತು. ನಾನಂತು ಸುತ್ತ-ಮುತ್ತಲು ತಿರುಗಿ ತಿರುಗಿ ನೋಡುತ್ತ ಯಾವ ಕಡೆಯಿಂದ ಹುಲಿ ಬಂದು ನನ್ನ ಮೇಲೆ ಎರಗುವುದೋ. ಈ ಸಮಯದಲ್ಲಿ ತಲೆ ಹಿಂಭಾಗಕ್ಕೆ ಇನ್ನೆರಡು ಕಣ್ಣುಗಳಿದ್ದರೆ ಉಪಯೋಗಕ್ಕೆ ಬರುತ್ತಿತ್ತೇನೋ

ಎಂದುಕೊಂಡು ಅಶ್ವಥ್ ಕಡೆ ನೋಡಿದೆ. ಅವರು ಮೆಲ್ಲಗೆ ಬೆಟ್ಟದ ಬದಿಯಲ್ಲಿ ಬಿದ್ದಿದ್ದ ಕಲ್ಲುಗಳನ್ನು ಆಯ ತೊಡಗಿದರು. ನಾನು ಅದನ್ನು ಯೋಚನೆ ಮಾಡುವಷ್ಟರಲ್ಲೆ, ನನ್ನ ಕೈಗಳು ಒಂದು ಚೂಪಾದ ಕಲ್ಲನ್ನು ಹುಡುಕಿ ಅದನ್ನು ಗಟ್ಟಿಯಾಗಿ ಹಿಡಿದಿದ್ದವು. *"ಬರಲಿ ಅಧ್ಯಾವ ಹುಲಿಯು ಬರುತ್ತೋ ನೋಡೆ ಬಿಡ್ತೀನಿ ಒಂದು ಕೈ, ಅದರ ಮುಖವನ್ನು ಇದೆ ಕಲ್ಲಿನಿಂದ ಜಜ್ಜಿ ಬಿಡುತ್ತೇನೆ"* ಎಂದು ಪರಶುರಾಮನಂತೆ ಯುದ್ಧಕ್ಕೆ ಕಾದು ನಿಂತೇ. ನೋಡುತ್ತಾ ನೋಡುತ್ತಾ ಬೆಳಗಿನಿಂದಲೂ ನಡೆದ ಒಂದೊಂದು ಘಟನೆಗಳು ನೆನಪಾಗತೊಡಗಿದವು. . . .

ನನ್ನ ಜೊತೆಯಲ್ಲೇ ಕೆಲಸ ಮಾಡುವ ಗೆಳೆಯ ನಾಗೇಶ ಗಣಿತಶಾಸ್ತ್ರದ ಪ್ರಾಚಾರ್ಯ. ಕೃಷಿ, ಕಾಡು ಪ್ರೀತಿಸುವ ನನ್ನ ಅಭಿರುಚಿಯನ್ನು ಅರಿತಿರುವ ಅವನು ಬಹಳಷ್ಟು ಬಾರಿ ಅವನ ಹುಟ್ಟೂರಿಗೆ ಆಹ್ವಾನಿಸಿದ್ದ. ಸಮಯದ ಅಭಾವದಿಂದ ನಂಗು ಅದು ಸಾಧ್ಯವಾಗಿರಲಿಲ್ಲ. ಆದರೆ ಈ ದಿನ ಬಿಡುವು ಮಾಡಿಕೊಂಡು ಭಾನುವಾರದ ರಜೆಯನ್ನು ಪ್ರಕೃತಿಯೊಂದಿಗೆ ಕಳೆಯೋಣವೆಂದು ಹೊರಟಿದ್ದೆ. ಬೆಂಗಳೂರಿನಿಂದ ಸುಮಾರು 35 ಕಿಮೀ ದೂರವಿರುವ ಆ ಊರ ಹೆಸರು *ಶಿವನಹಳ್ಳಿ* ಎಂದು. ಸುತ್ತಲು ಹರಡಿಕೊಂಡಿರುವ ಬನ್ನೇರುಘಟ್ಟ ಕಾಡಿನ ಮಧ್ಯೆ ದ್ವೀಪದಂತೆ ಸೃಷ್ಟಿಯಾಗಿರುವ ಒಂದು ಚಿಕ್ಕ ಹಳ್ಳಿ. ಅದರ ಸುತ್ತಲು ಬರಿ ಬೆಟ್ಟ-ಗುಡ್ಡಗಳೆ ತುಂಬಿವೆ. ಮೊದಲ ಬಾರಿಗೆ ಕಾಡನ್ನು ತುಂಬಾ ಹತ್ತಿರದಿಂದ ನೋಡುವ ಉತ್ಸಾಹ ಹೆಚ್ಚಾಗಿದ್ದರಿಂದ ರಸ್ತೆಯ ಸ್ಥಿತಿಗತಿಗಳನ್ನು ಲೆಕ್ಕಿಸದೆ ಬೇಗ ಆ ಹಳ್ಳಿಯನ್ನು ತಲುಪಿದೆ. ಆದರೆ ಆ ಹಳ್ಳಿಯನ್ನು ತಲುಪುವ ಮುನ್ನ ನನಗೆ ಎದುರಾಗಿತ್ತು *ಸ್ಟಡಿ ಹೌಸ್* ತುಂಬಾ ಹಳೆಯ ದೇಶಿ ಶೈಲಿಯ ಹಾಸು ಹೆಂಚುಗಳ ಹೊದ್ದು, ಎಷ್ಟೋ ಬಡ ವಿಧ್ಯಾರ್ಥಿಗಳ ಭವಿಷ್ಯಕ್ಕೆ ಸಹಾಯ ಹಸ್ತ ಚಾಚಿರುವ ಮನೆ ಉನ್ನತ ವ್ಯಾಸಂಗದ ಕನಸುಗಳನ್ನು ಹೊತ್ತುತರುವ ಕಣ್ಣುಗಳಿಗೆ ಆಶ್ರಯ ನೀಡಿರುವ ಮನೆ. ಎಂತ ಅನುಭವ ನಿಜಕ್ಕು ನನಗೆ ರೋಮಾಂಚನವಾಯಿತು. ಈ ಮನೆಯಲ್ಲಿ ಎಷ್ಟೊಂದು




ಕನಸುಗಳಿಗೆ ರೆಕ್ಕೆ ಪುಕ್ಕಗಳನ್ನು ಕಟ್ಟಿ ಹಾರಿಬಿಡುತ್ತಿದ್ದಾರೆನೋ ಎನಿಸಿತು. ಮೊದಲು ನನ್ನ ಎದುರುಗೊಂಡಿದ್ದು ನಾಗೇಶ ನನ್ನ ಗೆಳೆಯ, ವೃತ್ತಿಯಲ್ಲಿ ಭೋದಕನಾದರು ಹವ್ಯಾಸದಲ್ಲಿ *'ವನ್ಯಜೀವಿಗಳ ಸಂರಕ್ಷಣೆ ಗುಂಪು'* ಎಂಬ ಸಂಘದಲ್ಲಿ ನಿರಂತರವಾಗಿ ಕಾಡು, ಪ್ರಾಣಿ-ಪಕ್ಷಿಗಳ ಹಿತ ಕಾಯುತ್ತ ಸಮಾಜಮುಖಿ ಕೆಲಸಗಳನ್ನೂ ಮಾಡುತ್ತಿದ್ದಾನೆ. ಇಲ್ಲೇ ನನಗೆ

ಪರಿಚಯವಾಗಿದ್ದು ಅಶ್ವಥ್ ಭೂಗೋಳತಜ್ಞರು. ಕಾಡಿನ ಮೂಲೆ ಮುಡುಕುಗಳು, ಸಂದಿ-ಗೊಂದಿಗಳು, ಪ್ರಾಣಿ-ಪಕ್ಷಿಗಳು ಪ್ರಕೃತಿಯ ಬಗ್ಗೆ ಅಪಾರ ಜ್ಞಾನ ಹೊಂದಿರುವ ಇವರು ನಿಜಕ್ಕೂ ಅದ್ಭುತ ವ್ಯಕ್ತಿ. ನಂತರ ಪರಿಚಯವಾದದ್ದು ಮಹದೇವು ವನ್ಯಜೀವಿ ಸಂರಕ್ಷಣೆ ಸಂಘದ ಅಧ್ಯಕ್ಷರಾಗಿರುವ ಶಂಕರಪ್ಪನವರ ಏಕೈಕ ತಮ್ಮ. ಹಳ್ಳಿ ಸೊಗಡು ತುಂಬಿರುವ ನಿರರ್ಗಳವಾಗಿ ಮಾತನಾಡುವ ಧೀಮಂತ ವ್ಯಕ್ತಿ ಈ ಮಹದೇವು. ಕಾಫಿ ಉಪಚಾರವನ್ನು ಮುಗಿಸಿ ಈ ಮೂವ್ವರು ವ್ಯಕ್ತಿಗಳನ್ನು ಒಳಗೊಂಡು ಸುಮಾರು ಆರುಗಂಟೆ ಸಂಜೆಯ ವೇಳೆಗೆ ಹೊರಬಿತ್ತು ನಮ್ಮ ಚಾರಣದ ಬಂಡಿ. ದಾರಿಯಲ್ಲಿ ಸಿಕ್ಕ ಅಂಗಡಿಯೊಂದರಲ್ಲಿ ಕುರುಕಲು ತಿಂಡಿಗಳನ್ನು ಬಾಚಿಕೊಂಡು ಹೊರಟ ನಾವು ರಾಮಕೃಷ್ಣ ಆಶ್ರಮವನ್ನು ಬಳಸಿಕೊಂಡು ಹಾವು ತೋರಿಸಿದ ಹಾದಿಯಲ್ಲಿ ಸಾಗಿ ಶಾಂತಿ ಮನೆ ತಲುಪಿ, ನಮ್ಮ ದ್ವಿಚಕ್ರ ವಾಹನವನ್ನು ಅಲ್ಲಿಯೇ ನಿಲ್ಲಿಸಿ, ಅಲ್ಲಿಂದ ಕಾಲ್ನಡಿಗೆಯಲ್ಲೇ ಮುಂದೆ ಸಾಗಿದೆವು. ಅದಾಗಲೇ ಸಂಜೆಯಾದ್ದರಿಂದ ಆಹಾರವನ್ನು ಅರಸಿ ಹೋಗಿದ್ದ ಪಕ್ಷಿಗಳು ಮರಳಿ ತಮ್ಮ ಗೂಡನ್ನು ಸೇರುತ್ತಿದ್ದವು. ನೀಲಿಯಾಗಿದ್ದ ಆಕಾಶವೆಲ್ಲ ಹೊಂಬಣ್ಣಕ್ಕೆ ತಿರುಗಿ ರಂಗಿನೋಕುಳಿಯಾಡಿದಂತ್ತಿತ್ತು. ಕಾಡಿನ ಕಾಲುದಾರಿಯಲ್ಲಿ ಸಾಗುತ್ತಿದ್ದ ನಮಗೆ ಗಿಡ ಗಂಟೆಗಳು, ಮುಳ್ಳು ಬೇಲಿಗಳು, ಲಂಟಾನ ಪೊದೆಗಳು ಅದ್ಭುತ ಆಹ್ವಾನ ನೀಡಿದವು. ನಮ್ಮ ದಾರಿಗೆ ದಿಕ್ಸೂಚಿಯಂತೆ ಸಾಗುತ್ತಿದ್ದ ಅಶ್ವಥ್ ಅವುಗಳನ್ನೆಲ್ಲ ಸರಿಸಿ ನಮಗೆ ದಾರಿಮಾಡಿ ಕೊಡುತ್ತಿದ್ದರು. ಸಾಗುತ್ತ ಸಾಗುತ್ತ ಕಾಡಿನ ಮಧ್ಯೆ ಸುಮಾರು 40-50 ಅಡಿ ಎತ್ತರ ಇರುವ ಬೆಟ್ಟವನ್ನು ಏರತೊಡಗಿದೆವು. ದಾರಿಯುದ್ದಕ್ಕೂ ತಮ್ಮ ಹಳೆಯ ಅನುಭವಗಳನ್ನು ಹಂಚಿಕೊಳ್ಳುತ್ತ ನಿರರ್ಗಳವಾಗಿ ಮಾತನಾಡುತ್ತಿದ್ದರು, ಮಹದೇವು. ತೂರಿಬರುತ್ತಿದ್ದ ಕಾಡು ಸಂಪಿಗೆಯ ಕಂಪಿನೊಂದಿಗೆ ಸಾಧ್ಯವಲ್ಲದ ಬೆಟ್ಟವನ್ನು ತುಂಬಾ ಸಲೀಸಾಗಿ ಏರಿದೆವು. ವಿಶಾಲವಾದ ಸ್ಥಳ ಅಲ್ಲಲ್ಲಿ ನೀರಿನ ಕೊರಕಲುಗಳು ಜೊತೆಗೊಂದು 'ವಾಚಿಂಗ್ ಪಾಯಿಂಟ್'. ಬೆಟ್ಟವನ್ನು ಹತ್ತಿಬಂದ ಎಷ್ಟೋ ಮಹನೀಯರು ತಮ್ಮ ಯಶೋಗಾಥೆಯನ್ನು ತೋರಲು ಜೋಡಿಸಿರುವ ಕಲ್ಲುಗಳು, ನಾಗರೀಕತೆಯ ಪ್ರತೀಕವೆಂಬಂತೆ ಎಲ್ಲೆಂದರಲ್ಲಿ ಬಿಸಾಡಿದ ಪ್ಲಾಸ್ಟಿಕ್ ಚೀಲಗಳು ಮತ್ತು ಬೀಯರ್ ಬಾಟಲಿಗಳನ್ನು ಕಂಡು, ಸೂರ್ಯಸ್ಥವನ್ನು ನೋಡುವ ಹಂಬಲವಾಗಿ ಬೆಟ್ಟದ ಹಿಮ್ಮುಖಕ್ಕೆ ಸಾಗಿದೆವು, ಅದಾಗಲೇ ಸೂರ್ಯ ತನ್ನ ಗೂಡು ಸೇರಿ ಬಹಳ ಹೊತ್ತಾಗಿತ್ತು.

ಅಲ್ಲಿಯೇ ಬೆಟ್ಟದ ಇಳಿಜಾರಿಗೆ ಕಾಲು ಚಾಚಿ ವಿಶ್ರಾಂತಿ ಪಡೆದುಕೊಳ್ಳೋಣವೆಂದು ಕುಳಿತುಕೊಂಡೆವು. ಜೊತೆಗೆ ತಂದಿದ್ದ ಕುರುಕಲು ತಿಂಡಿಗಳನ್ನು ಮೇಯುತ್ತ ಆ ಪ್ರಕೃತಿ ಸೌಂದರ್ಯವನ್ನು ಸವಿಯ ತೊಡಗಿದೆವು. ಸುತ್ತಲು ಬೆಳೆದಿರುವ ಬೆಟ್ಟಗಳು ಮಧ್ಯೆ ಕಾಲುವೆಯಂತೆ ಸೃಷ್ಟಿಯಾಗಿರುವ ಕಾಡು, ನಿಧಾನವಾಗಿ ಸಾಗುತ್ತಿದ್ದ ಮಂಜು ಬೆಟ್ಟವನ್ನು ಸಾಂತಕ್ಲಾಸ್ ತಾತನ ಗಡ್ಡದ ಹಾಗೆ ಅಂಟಿ ಕೊಳ್ಳುತ್ತಿದ್ದದು ಕಂಡುಬಂತು. ನಮ್ಮ ಜೊತೆಯೇ ಹರಟುತ್ತಿದ್ದ ಅಶ್ವಥ್ ಕಾಡಿನ ಕಡೆ ಬೆರಳು ಮಾಡಿ ತೋರಿಸುತ್ತ *"ಆ ಜಾಗದಲ್ಲೇ ಮೊನ್ನೆ ಹೊಸ ಹುಲಿಯೊಂದು ಕ್ಯಾಮೆರಾ ಟ್ರ್ಯಾಪ್ ಗೆ ಸಿಕ್ಕಿ ರೋದು"* ಎಂದರು. *''ಹೌದಾ ಸರ್ ಅದೇನದು ಕ್ಯಾಮೆರಾ ಟ್ರ್ಯಾಪ್''* ಎಂದು

ಮರು ಪ್ರಶ್ನೆ ಕೇಳಿದೆ. ಅದಕ್ಕವರು *"ಸಾಮಾನ್ಯವಾಗಿ ಕಾಡಿನ ಪ್ರಾಣಿಗಳ ಸ್ಥಿತಿಗತಿಗಳನ್ನು ತಿಳಿಯಲು ಅವುಗಳು ಓಡಾಡುವ ಸ್ಥಳಗಳಲ್ಲಿ ಸ್ವಯಂಚಾಲಿತ ಕ್ಯಾಮೆರಾಗಳನ್ನು ಅಳವಡಿಸಿರುತ್ತಾರೆ. ಅವು ಹೇಗೆಂದರೆ ಆ ಜಾಗದಲ್ಲಿ ಯಾವುದೇ ವಸ್ತು ಚಲಿಸಿದರು ತಕ್ಷಣ ಫೋಟೋ ತೆಗೆಯುತ್ತವೆ"* ಎಂದರು. *"ಸರ್ ಇಲ್ಲಿ ನಿಜವಾಗಿಯೂ ಹುಲಿ ಇದೆಯಾ"* ಎಂದ ನನಗೇಕೋ ಸ್ವಲ್ಪ ಭಯ ನಡುಕ ಶುರುವಾಯಿತು. ಅಲ್ಲಿಯವರೆಗೆ ಸುಂದರವಾಗಿ ಕಂಡ ಕಾಡು ತುಂಬಾ ಭಯಾನಕವಾಗಿ ಕಾಣತೊಡಗಿತು. ಸುತ್ತಲು ಕಣ್ಣು ಹಾಯಿಸತೊಡಗಿದೆ ಎತ್ತ ನೋಡಿದರೂ ಬರಿ ಕತ್ತಲು. ಪಕ್ಕದ ಪೊದೆಯಿಂದ ನಾಯಿ ಬೊಗಳಿದ ಶಬ್ಧ ಕೇಳಿಸತೊಡಗಿತು. ಕಿವಿ ನೆಟ್ಟಗಾದವು, ಹೌದು ಅದು ನಾಯಿ ಆದರೆ ದೊಡ್ಡದಲ್ಲ ಚಿಕ್ಕ ಮರಿ ಸುಮ್ಮನೆ ನಮ್ಮನ್ನು ನೋಡಿ ಬೊಗಳುತ್ತಿತು. *''ಅಯ್ಯೋ ಪಾಪ ಈ ನಾಯಿ ಮರಿ ಇಲ್ಲಿಗೆ ಹೇಗೆ ಬಂತು, ಯಾರು ತಂದು ಈ ಕಾಡಿಗೆ ಬಿಟ್ಟಿದ್ದು"* ಎಂದ ನಾಗೇಶ *"ಯಾರೋ ಬೆಟ್ಟ ಹತ್ತಲು ಬರುವಾಗ ಅವರ ಹಿಂದೆ ಬಂದು ಅವರು ಹೋದಾಗ ಇದು ಇಲ್ಲೇ ಉಳಿದಿದೆ''* ಎಂದರು ಅಶ್ವಥ್. ನನಗು ಕನಿಕರ ಹುಟ್ಟಿ ಅದನ್ನು ಕರೆದು ಕೈಲಿದ್ದ ಕುರುಕಲು ತಿಂಡಿ, ಬಿಸ್ಕೆಟ್ಗಳನ್ನು ಹಾಕಿದೆ ತಿನ್ನತೊಡಗಿತು. ಅದಾಗಲೇ ತುಂಬಾ ಹೊತ್ತಾಗಿದ್ದ ಕಾರಣ ಬೆಟ್ಟದ ಸುತ್ತಮುತ್ತಲು ಹರಡಿಕೊಂಡಿದ್ದ ಹಳ್ಳಿಗಳು ನಾವು ನಾಗರೀಕರಾಗಿದ್ದೇವೆ ಎಂದು ಬೀದಿ ದೀಪಗಳನ್ನು ಬೆಳಗಿಸಿ ಕೂಗಿ ಹೇಳುತ್ತಿದ್ದವು. ತಮ್ಮ ಸಮಯ ಅಲ್ಲಿ ಕಳೆಯುವುದು ಕ್ಷೇಮವಲ್ಲ ಎಂದು ಅಲ್ಲಿಂದ ಹೊರಟೆವು. ಸ್ವಾಮಿನಿಷ್ಠೆ ತೋರಿಸಲು ನಾಯಿ ಮರಿಯು ನಮ್ಮ ಜೊತೆಯಲ್ಲೇ ಹೊರಟು ಬಂತು. ಕೈಲಿದ್ದ ಮೊಬೈಲುಗಳನ್ನೇ ಟಾರ್ಚ್ ಮಾಡಿಕೊಂಡು ಬೆಟ್ಟದ ಇಳಿಜಾರನ್ನು ನೋಡಿಕೊಂಡು ನಿಧಾನವಾಗಿ ಇಳಿಯತೊಡಗಿದೆವು.

ಕಣ್ಣರಳಿಸಿ ನೋಡಿದೆ ಕಣ್ಣಿಗೆ ಪ್ರಕಾಶಮಾನವಾದ ಬೆಳಕು ಕಣ್ಣನ್ನು ಮಂಜು ಮಾಡುತ್ತಿದೆ. ಕೈಯಲ್ಲಿ ಗಟ್ಟಿಯಾಗಿ ಹಿಡಿದ ಕಲ್ಲು ಬೇರೆ ಇದೆ, ಯಾರೋ ಕೂಗುತ್ತಿದ್ದಾರೆ *"ಮಧುಸರ್, ಸರ್ . . ." ಎಂದು, ಆಲಿಸಿದೆ . . . ನಾಗೇಶನ ಧ್ವನಿ ಮುಂದೆ ಬನ್ನಿ ಸರ್ ಯಾಕೆ ಅಲ್ಲೇ ನಿತ್ಕೊಬಿಟ್ರಿ"* ಎಂದ. ನನಗೆ ತಕ್ಷಣ ವಾಸ್ತವದ ನೆನಪಾಯ್ತು.



ಮುಂದೆ ಸಾಗ ತೊಡಗಿದೆ ಎಲ್ಲರು ಆ ಪೊದೆಯತ್ತ ಒಂದೊಂದೇ ಕಲ್ಲು ಎಸೆದು ಶಬ್ಧ ಮಾಡತೊಡಗಿದರು, ಅಲ್ಲಿಂದ ಯಾವುದೇ ಉತ್ತರ ಬರಲಿಲ್ಲ. *"ಇದೆ ಒಳ್ಳೆ ಸಮಯ ಬನ್ನಿ ಬೇಗ ಎಲ್ಲ ಹೊರಟು ಬಿಡೋಣ"* ಎಂದು ಅಶ್ವಥ್ ಮುಂದೆ ಹೊರಟರು. ಜೀವ ಉಳಿದರೆ ಸಾಕಪ್ಪ ಎನ್ನುವ ಸ್ಥಿತಿಯಲಿದ್ದ ನಾವು ಅವರನ್ನು

ಹಿಂಬಾಲಿಸ ತೊಡಗಿದೆವು. ಕಾಡಿಗೆ ಅಳವಡಿಸಲಾಗಿದ್ದ ಸೋಲಾರ್ ಫೆನ್ಸ್ ಬೇಲಿ ಎದುರಾಯಿತು. ಅಲ್ಲೇ ಬಿದ್ದಿದ್ದ ಒಣಗಿದ ಮರದ ಕಡ್ಡಿಗಳನ್ನು ಮುರಿದುಕೊಂಡು ಅದರ ಸಹಾಯದಿಂದ ಕೆಳಗಿನ ತಂತಿಯನ್ನು ಕಾಲಲ್ಲಿ ಒತ್ತಿಹಿಡಿದು ಕೈಯಲ್ಲಿ ಇನ್ನೊಂದು ಕಡ್ಡಿಯಿಂದ ಮಧ್ಯದ ತಂತಿಯನ್ನು ಹಿಡಿದು ಬೇಗ ಬನ್ನಿ ತೂರಿ ಇದರೊಳಗೆ ಎಂದರು ಅಶ್ವಥ್. ಅವರ ಸಹಾಯಕ್ಕೆ ನಿಂತರು ಮಹದೇವು. ನನ್ನ ಮೈಂಡೆಲ್ಲವೂ ಬ್ಲಾಂಕ್ ಆಗಿದ್ದ ಕಾರಣ ನಾನು ಏನು ಮಾಡುತ್ತಿದ್ದೇನೆ ಎಂಬುದು ತಿಳಿಯದ ಹಾಗಾಗಿತ್ತು.  ನನ್ನ ಪರಿಸ್ಥಿತಿ ಸುಮ್ಮನೆ ಅವರು ಹೇಳಿದ್ದನ್ನು ಮಾಡುವ ಹಾಗಾಗಿತ್ತು. ಆ ಮುಳ್ಳು ಬೇಲಿಯನ್ನು ದಾಟಿ ಹೊರಬಂದೆವು.

ಕೈಲಿದ್ದ ಕಲ್ಲು ಮಾತ್ರ ಹಾಗೆ ಇತ್ತು. ಇದನ್ನು ಗಮನಿಸಿದ ಮಹದೇವು ನಕ್ಕು "*ಸರ್, ಸರ್. . . ಏನದು ಕಲ್ಲನ್ನು ಬಿಸಾಕಿ ಇನ್ನು ಯಾವ ಹುಲಿಯು ಇಲ್ಲಿ ಬರುವುದಿಲ್ಲ*" ಎಂದರು. ಸ್ವಲ್ಪ ಸಮಾಧಾನವಾಯಿತು ಕಲ್ಲನ್ನು ಎಸೆದು ಮುಂದೆ ಸಾಗಿದೆ. ಸಾಗುತ್ತ ಸಾಗುತ್ತ ನಾನು ದ್ವಿಚಕ್ರವಾಹನ ನಿಲ್ಲಿಸಿದ್ದ ಶಾಂತಿ ಮನೆಯನ್ನು ತಲುಪಿದೆವು. ನಾಯಿ ಮರಿಯು ನಮ್ಮ ಜೊತೆಯಲ್ಲೇ ಬಂದಿತ್ತು.  ಬೆಟ್ಟದ ಮುಂಭಾಗದಿಂದ ಹತ್ತಿದ್ದ ನಾವು ಹಿಂಭಾಗದಿಂದ ಇಳಿದು ಬಳಸಿ ಬಂದು ಅದೇ ಜಾಗ ಸೇರಿದ್ದೆವು. ದ್ವಿಚಕ್ರವಾಹನಗಳನ್ನು ಏರಿ ಮನೆಯಕಡೆ ಮುಖಮಾಡಿ ಹೊರಟೆವು. ಅಶ್ವಥ್ ಆ ನಾಯಿ ಮರಿಯನ್ನು ಜೊತೆಯಲ್ಲಿ ಕರೆದುಕೊಂಡು ಬಂದರು. ಇನ್ನೇನು ಶಿವನಹಳ್ಳಿ ತಲುಪುವ ದಾರಿಯಲ್ಲಿ ಸಿಕ್ಕ ಒಂದು ಡಾಬ ಹೋಟೆಲ್ಗೆ ನಾಯಿ ಮರಿಯನ್ನು ಬಿಟ್ಟು ಹಳ್ಳಿಯನ್ನು ತಲುಪಿದೆವು. ಮನೆಯಲ್ಲಿ ಬಿಸಿಬಿಸಿ ಅವರೇ ಕಾಳು ಹಿಸ್ಕಿದ್ ಬೇಳೆ ಸಾರುಮಾಡಿ ಕಾಯುತ್ತಿದ್ದರು ನಾಗೇಶನ ತಾಯಿ. ತುಂಬಾ ಬಳಲಿ ಹಸಿದಿದ್ದ ನಾವು ಹೊಟ್ಟೆಗೆ ತೃಪ್ತಿಯಾಗುವವರೆಗೂ ತಿಂದೆವು. ಸ್ವಲ್ಪ ಹೊತ್ತು ಹರಟೆ ಹೊಡೆದು ಹಸಿದ ಹೊಟ್ಟೆಗೆ ಅಮೃತವನ್ನು ನೀಡಿದ ಆ ತಾಯಿಗೆ ವಂದನೆಗಳನ್ನು ತಿಳಿಸಿ, ಅಲ್ಲಿಂದ ಸ್ಟಡಿ ಹೌಸ್ ಕಡೆ ಮುಖಮಾಡಿ ಹೊರಟೆವು.



- ಮಧುಸೂದನ್ .ಎಚ್ .ಸಿ





# ಕೀಟಲೋಕಕ್ಕೆ ಹೊಸತು

*Trigonopteras chewbacca*

ಸ್ಟಾರ್ ವಾರ್ ನ *Chewbacca*ನ ಹೆಸರಿನಲ್ಲಿ ಒಂದು ಹೊಚ್ಚ ಹೊಸ ದುಂಬಿಯನ್ನು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ನ್ಯೂಗಿನಿಯ ಒಂದು ದ್ವೀಪದ ಕಾಡಿನಲ್ಲಿ ಮೂರು ಮಿಲಿಮೀಟರ್ ಉದ್ದವಿರುವ, ಹಾರಲಾರದ, ಕಪ್ಪಗಿರುವ ಈ ದುಂಬಿಯನ್ನು ವಿಜ್ಞಾನಿಗಳು *Trigonopteras chewbacca* ಎಂದು ಹೆಸರಿಟ್ಟಿದ್ದಾರೆ.

ಸ್ಟಾರ್ ವಾರ್ ಚಿತ್ರದ Chewbacca ನಂತೆ ಇದರ ತಲೆಯ ಮತ್ತು ಕಾಲುಗಳ ಮೇಲೆ ಇರುವ ದಟ್ಟ ಕೂದಲುಗಳ ದೆಸೆಯಿಂದ ಇದಕ್ಕೆ ಈ ಹೆಸರನ್ನು ನಾಮಕರಣ ಮಾಡಿದ್ದೇವೆ ಎನ್ನುತಾರೆ ವಿಜ್ಞಾನಿಗಳು. ಒಟ್ಟಿನಲ್ಲಿ ಕೀಟಲೋಕದಲ್ಲಿ ಇನ್ನೂ ಯಾರೂ ಕಾಣದ ಕೀಟಗಳು ಎಷ್ಟಿವೆಯೋ? ನಿಮ್ಮ ಮನೆಯ ಅಂಗಳದಲ್ಲೇ ಹೊಸ ಕೀಟವೋ, ಜೇಡವೋ ಇರಬಹುದು ಒಮ್ಮೆ ಕಣ್ಣಾಡಿಸಿ ನೋಡಿ!.






- ಶಂಕರಪ್ಪ .ಕೆ .ಪಿ



# ಭೂ ದಿನ

ಭೂ ದಿನವಿಂದು
ಶತಮಾನಗಳಿಂದ ನಶಿಸಿರುವ
ಆಧುನೀಕತೆಗೆ ನಲಗಿರುವ
ಜಾಗತೀಕತಾಪದಿ ಬೆಂದಿಹ
ಭೂಮಿಗೆ, ಭೂದಿನದ ಸಂಭ್ರಮ

ಭೂ ದಿನವಿಂದು
ಜೀವ ವೈವಿಧ್ಯದ ವಿನಾಶದಿಂದ
ಹವಾಮಾನ ವೈಪರಿತ್ಯದಿಂದ
ಪ್ರಾಕೃತಿಕ ವಿಕೋಪಗಳಿಂದ
ಬೆಂದು, ಸಂರಕ್ಷಣೆಯ ದೀಕ್ಷೆಯೊಂದಿಗೆ ಭೂದಿನ




ಭೂ ದಿನವಿಂದು
ಜಲಮೂಲಗಳ ಮಲಿನ ಗೊಳಿಸಿ
ವನ ಸಂಪತ್ತೆಲ್ಲಾ ಬರಿದಾಗಿಸಿ
ಭೂರಚನೆಯ ವಿಕೃತಗೊಳಿಸಿ
ಅಂಕಿ ಅಂಶಗಳ ವಿಕೃತದ ನಕ್ಷೆಯೊಂದಿಗೆ ಭೂದಿನ

ಭೂ ದಿನವಿಂದು
ಕೆಂಪು ಪಟ್ಟಿ ಸಂಧ್ಯೆಯ ಕ್ಷೀಣಿಸಬೇಕು
ಮತ್ತೆ ಹಿಮಪಾತದೆತ್ತರ ಏರಬೇಕು
ಶುದ್ಧ ಭೂ, ಜಲ, ವಾಯು ಎಲ್ಲರಿಗೂ ಸಿಗಬೇಕು
ಇದೇ, ಭೂ ದಿನಕೆ ನೀಡಬೇಕಾದ ಗೌರವ.

- ಕೃಷ್ಣನಾಯಕ್






*ಹೊಂಬಿಸಿಲ ಜೀವ ಜಲದಲ್ಲಿ ಬಣ್ಣದ ಕೊಕ್ಕರೆ. . . !*



*ಮುಂಜಾವಿನ ಮಂಜಿನ ಉಪಹಾರದ ಹುಡುಕಾಟದಲಿ ನಾವು. . . !*

*- ಕಾರ್ತಿಕ್.ಎ.ಕೆ*



